# ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

**ವಿಷಯದ ಸಂಖ್ಯೆ: 43/2010–11**

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣ ರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು

ನಿರ್ಣಯ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪ್ರತಿ ವಾರ್ಡಿನ ಬಡಾವಣೆಗಳ ರಸ್ತೆಗಳು ಹಾಗೂ ಸ್ವತ್ತುಗಳ ಸಂಖ್ಯೆಗಳು ಹಾಲಿ ಕ್ರಮ ಬದ್ಧವಾಗಿ ಇಲ್ಲದೆ ಅವೈಜ್ಞಾನಿಕವಾಗಿದ್ದು. ಸದರಿ ಸ್ವತ್ತುಗಳ ಸಂಖ್ಯೆಯನ್ನು ವೈಜ್ಞಾನಿಕ ರೀತಿಯಲ್ಲಿ ಕ್ರಮವಾಗಿ ಬರುವಂತೆ ಅಂದರೆ, ವಾರ್ಡಿನ ರಸ್ತೆಗಳನ್ನು 1ನೇ ರಸ್ತೆಯಿಂದ ಪ್ರಾರಂಭಿಸಿ, ಮುಂದುವರೆದ ಸಂಖ್ಯೆಗಳನ್ನು ನೀಡಬೇಕಾಗಿದೆ. ಹಾಗೂ ಆಸ್ತಿ ಸಂಖ್ಯೆಗಳನ್ನು ಸಹ ಆಯಾ ರಸ್ತೆಗಳಿಗೆ 1ನೇ ಸಂಖ್ಯೆಯಿಂದ ಪ್ರಾರಂಭಿಸಿ ಆಯಾ ರಸ್ತೆಗಳಿಗೆ ಆಸ್ತಿ ಸಂಖ್ಯೆಯನ್ನು ಅನ್ವಯಗೊಳಿಸುವುದು.

ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು

ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು

ನಿರ್ಣಯ:- ಈ ವಿಷಯದ ಬಗ್ಗೆ ಆಯುಕ್ತರು ಶೀಘ್ರವಾಗಿ ಕ್ರಮ ತೆಗೆದುಕೊಂಡು ಸಭೆಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಲು ಸೂಚಿಸಲಾಯಿತು.

ಎಸ್.ಕೆ. ನಟರಾಜ್

(ಎಸ್.ಕೆ. ನಟರಾಜ್)

ಮಹಾಪೌರರು